# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 905 |
| ಉತ್ತರಿಸುವ ದಿನಾಂಕ | 13-12-2023 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪಿ.ಹೆಚ್.ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಲವಾರು ವರ್ಷಗಳಿಂದ ರಾಜ್ಯಾದ್ಯಂತ ನಿರಂತರವಾಗಿ ಜಮೀನುಗಳ ಮೌಲ್ಯವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಬಂದಿರುವುದರಿಂದ ವೈಜ್ಞಾನಿಕ ಮತ್ತು ವಸ್ತು ಸ್ಥಿತಿಯ ಅಧ್ಯಯನಗಳ ಮೂಲಕ ಜಮೀನು ಮೌಲ್ಯವರ್ಧನೆಯ ಸೂಚ್ಯಂಕವು ಪ್ರತಿ ವರ್ಷ 10% ಎಂದು ನಿರ್ಧಿಷ್ಟಪಡಿಸಲಾಗಿದೆಯೆ; ಇತ್ತೀಚೆಗೆ ಭೂ ಮಾರ್ಗಸೂಚಿ ದರಗಳಲ್ಲಿ ತೀವ್ರ ಹೆಚ್ಚಳ ಮಾಡಿ ಸರ್ಕಾರ ಆದೇಶ ನೀಡಿರುವುದು ಇದೇ ಸೂತ್ರದ ಅನ್ವಯವೇ (ಮಾಹಿತಿ ನೀಡುವುದು) | ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರವು 2019-20ನೇ ಸಾಲಿನಿಂದ ಪರಿಷ್ಕರಣೆ ಆಗಿರುವುದಿಲ್ಲ. ತದನಂತರದಲ್ಲಿ ರಾಜ್ಯದಾದ್ಯಂತ ಪ್ರದೇಶವಾರು ಸಾಕಷ್ಟು ಅಭಿವೃದ್ಧಿ ಹೊಂದಿರುವುದರಿಂದ ಮಾರ್ಗಸೂಚಿ ದರ ಮತ್ತು ಪ್ರಸ್ತುತ ಮಾರುಕಟ್ಟೆ ದರಕ್ಕೂ ಸಾಕಷ್ಟು ವ್ಯತ್ಯಾಸವಿರುತ್ತದೆ ಹಾಗೂ ಕೆಲವೊಂದು ಪ್ರದೇಶಗಳಲ್ಲಿ ಬೇಡಿಕೆ ಇಲ್ಲದೆ ಬೆಲೆ ಕುಸಿದಿರುತ್ತದೆ. ಈ ಎಲ್ಲಾ ನ್ಯೂನ್ಯತೆಗಳನ್ನು ಪರಿಷ್ಕರಿಸಿ ಪ್ರಸ್ತುತ ಮಾರುಕಟ್ಟೆಯಲ್ಲಿರುವ ಸ್ಥಿರಾಸ್ತಿಗಳ ದರಗಳನ್ನು ಪರಿಗಣಿಸಿ ಹಾಗೂ ಮಾರಾಟದ ಅಂಕಿ-ಅಂಶಗಳ ಆಧಾರದ ಮೇಲೆ ನಿರ್ದಿಷ್ಟ ಶೇಕಡಾವಾರು ದರ ಹೆಚ್ಚಿಸದೆ ವೈಜ್ಞಾನಿಕವಾಗಿ ಹಾಗೂ ತರ್ಕಬದ್ಧವಾಗಿ ಅಧ್ಯಯನ ನಡೆಸಿ, 2023-24ನೇ ಸಾಲಿನ ಸ್ಥಿರಾಸ್ತಿಯ ಮಾರ್ಗಸೂಚಿ ದರಗಳನ್ನು ನಿಗದಿಪಡಿಸಲಾಗಿದೆ. |
| ಆ | ಇಲ್ಲದಿದ್ದಲ್ಲಿ ಯಾವ ಮಾನದಂಡದಿಂದ ದರಗಳಲ್ಲಿ ಪರಿಷ್ಕರಣೆ ಮಾಡಲಾಗಿದೆ. (ಜಿಲ್ಲಾವಾರು, ತಾಲ್ಲೂಕುವಾರು, ಭೂ ಮೌಲ್ಯವರ್ಧನೆಯ ಮಾಹಿತಿ ನೀಡುವುದು) | 2023-24ನೇ ಸಾಲಿನ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಗಳ ವಿವರಗಳನ್ನು ದಿನಾಂಕ : 01-10-2023 ರಿಂದ ಜಾರಿಗೆ ಬರುವಂತೆ ಕರ್ನಾಟಕ ವಿಶೇಷ ಇ-ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದ್ದು, ಮಾಹಿತಿಯು Website ವಿಳಾಸ http://erajyapatra.karnataka.gov.in ರಲ್ಲಿ ಲಭ್ಯವಿರುತ್ತದೆ. |
| ಇ | ಹಾಗಿದ್ದಲ್ಲಿ, ಕೃಷ್ಣ ಮೇಲ್ದಂಡೆ ಯೋಜನೆ ಅಡಿಯಲ್ಲಿ ಮುಳಗಡೆ ಅಥವಾ ಪುನರ್ ವಸತಿಗಾಗಿ ಗುರುತಿಸಲಾದ ಹಳ್ಳಿಗಳ ಜಮೀನುಗಳ ಮಾರ್ಗಸೂಚಿ ದರಗಳಲ್ಲಿ ಪರಿಷ್ಕರಣೆ ನಿಜವೇ; ಅದಕ್ಕೆ ಕಾರಣಗಳೇನು: (ವಿವರ ನೀಡುವುದು)? | ಭೂಸ್ವಾಧೀನಕ್ಕೆ ಒಳಪಟ್ಟ ಮುಳುಗಡೆ ಭಾಗದ ಗ್ರಾಮಗಳಿಗೆ ಸಂಬಂಧಿಸಿದಂತೆ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವಸತಿ ಕಾಯ್ದೆ, 2013ರ, ಸೆಕ್ಷನ್ 26ರ ಪ್ರಕಾರ ಭೂಮಿ ಸ್ವಾಧೀನಕ್ಕೆ ಒಳಪಡುವ ಜಮೀನುಗಳ ಮಾರುಕಟ್ಟೆ ದರಗಳನ್ನು ನಿಗದಿಪಡಿಸಲು ಜಿಲ್ಲಾಧಿಕಾರಿಗಳು ಅನುಸರಿಸಬೇಕಾದ ಕೆಲವೊಂದು ಮಾನದಂಡಗಳ ಅನುಸಾರ ಜಿಲ್ಲಾಧಿಕಾರಿಗಳು ಮಾರುಕಟ್ಟೆ ದರ ನಿಗದಿಪಡಿಸುವ ಅಧಿಕಾರ ಹೊಂದಿರುತ್ತಾರೆ. |

| | | |
|---|---|---|
| | | ಮುಂದುವರೆದು, ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳಿಗೆ ನ್ಯಾಯಬದ್ಧ ಪರಿಹಾರ ದರವನ್ನು ನಿಗದಿಪಡಿಸುವ ಸಂಬಂಧ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಸಚಿವ ಸಂಪುಟ ಉಪ ಸಮಿತಿಯ ನಿರ್ಣಯದಂತೆ ಇದೇ ವರ್ಷದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ/ 24/ ಎಲ್‌ಕ್ಯೂವಿ/ 2022 ದಿನಾಂಕ: 25-01-2023ರ ಆದೇಶದಂತೆ ಒಪ್ಪಂದದ ಐತೀರ್ಪು ರಚಿಸಿ ಆದೇಶಿಸಿದ ಹಿನ್ನೆಲೆಯಲ್ಲಿ, ಪ್ರಸ್ತುತ ಸಾಲಿನಲ್ಲಿ ಕೇಂದ್ರಮೌಲ್ಯ ಮಾಪನ ಸಮಿತಿಯಲ್ಲಿ ಮುಳುಗಡೆ ಭಾಗದ ಊರುಗಳ ಮಾರ್ಗಸೂಚಿ ದರಗಳ ಪರಿಷ್ಕರಣೆಗೆ ಪರಿಗಣಿಸಿರುವುದಿಲ್ಲ. |

ಕಂಇ/237/ಎಂಎನ್‌ಎಸ್‌ಎ/2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು